ದಿನಾಂಕಃ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀಮತಿ ಎಸ್ ಬಿ., ವಕೀಲರಿಂದಃ

ಚಾಸಾ 5 ನಗೆ ಅಕ್ಕನ ಮಗ ಎಂದರೆ ಸರಿ. ಚಾಸಾ 5 ರವರ ಮದುವೆಯು ಕಾಸರಗೋಡಿನಲ್ಲಿ ನಡೆಯಿತು ಎಂದರೆ ಸರಿ. ಮದುವೆಯ ಸಮಯದಲ್ಲಿ ನಾನೇ ಧಾರೆ ಎರೆದಿರುತ್ತೇನೆ ಎಂದರೆ ಸರಿ. ಚಾಸಾ 4, ನನ್ನ ಅಕ್ಕನಿಗೆ ಒಂದು ಗಂಡು ಹಾಗೂ ಹೆಣ್ಣು ಮಕ್ಕಳಿದ್ದು, ಮಗಳ ಹೆಸರು ಶಿಲ್ಪ ಹಾಗೂ ಮಗ ರಾಜೇಶ ಎಂದರೆ ಸರಿ. ಸದರಿ ಶಿಲ್ಪ ಅವರಿಗೆ ಮದುವೆಯಾಗಿದ್ದು ಅವರು ಚಾಸಾ 4 ಮತ್ತು 5 ರವರ ಜೊತೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಶಿಲ್ಪ ಅವರಿಗೆ ವಿವಾಹ ವಿಚ್ಛೇದನ ಆಗಿರುತ್ತದೆ ಎಂದರೆ ಸರಿ.

ಸದರಿ ಶಿಲ್ಪರವರು ಶಾನುವಳ್ಳಿಯ ರಾಮಬಟ್ಟರ ಮನೆಯಲ್ಲಿ ವಾಸ ಇರುತ್ತಾರೆ. ಆ ರೀತಿ 4 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸ ಇರುತ್ತಾರೆ. ಸದರಿ ಶಿಲ್ಪ ಅವರು ಆ ರೀತಿ ಬಾಡಿಗೆ ಮನೆಯಲ್ಲಿ ವಾಸವಿರುವ ಬಗ್ಗೆ ಬಾಡಿಗೆ ಕರಾರುಪತ್ರವನ್ನು ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ ಎಂದರೆ ಸರಿ.

ಚಾಸಾ 4 ರವರ ಮಗನ ಮೇಲೆ ಕಾಸರಗೋಡಿನಲ್ಲಿ 3 ನೇ ಆರೋಪಿ ಜೀವನಾಂಶದ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಚಾಸಾ 4 ರವರ ಮಗ ಹಾಗೂ 3 ನೆ ಆರೋಪಿ ಮದುವೆಯ ನಂತರ ಎಷ್ಟು ಸಮಯ ಚೆನ್ನಾಗಿ ಇದ್ದರು ಎಂದರೆ ಮದುವೆಯಾದ ಒಂದು ವರ್ಷದ ಕಾಲ ರಾಜೇಶ್ ಹಾಗೂ 3 ನೇ ಆರೋಪಿ ಅನ್ಯೋನ್ಯವಾಗಿ ಜೀವನ ನಡೆಸಿದ್ದರು. ಸದರಿ ಚಾಸಾ5 ಹಾಗೂ ಅವರ ಮಗಳು ಶಿಲ್ಪ ಅವರನ್ನು 3 ನೇ ಆರೋಪಿ ತೊಂದರೆ ಕೊಡುತ್ತಿದ್ದರಿಂದ ಶಾನುವಳ್ಳಿಯಲ್ಲಿ ಶಿಲ್ಪ ಅವರಿಗೆ ಒಂದು ಬಾಡಿಗೆ ಮನೆ ಮಾಡಿದ್ದರು ಎಂದರೆ ಸರಿ.

3 ನೇ ಆರೋಪಿಗೆ ನಾನು ಚಾಸಾ 4 , 5 ಹಾಗೂ ಶಿಲ್ಪ ಅವರು ಸೇರಿ ದೌರ್ಜನ್ಯ

ನೀಡುತ್ತಿರುವುದರ ವಿರುದ್ಧ ದೂರು ದಾಖಲಿಸುತ್ತಾರೆ ಎಂಬ ಭಯದಿಂದ ಆರೋಪಿತರ ವಿರುದ್ಧ ದೂರು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಕೃತ್ಯ ನಡೆಯಿತು ಎನ್ನಲಾದ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದೆನು.

ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೂ ಹಾಗೂ ನನ್ನ ಮನೆಗೂ ಸುಮಾರು 100 ಅಡಿ ಅಂತರ ಇರುತ್ತದೆ.

ಕೃತ್ಯ ನಡೆಯಿತು ಎನ್ನಲಾದ ಸಮಯದಲ್ಲಿ ಎಷ್ಟು ಜನ ಬಂದಿದ್ದರು ಎಂದರೆ ನ್ಯಾಯಾಲಯದ ಮುಂದಿರುವ 6 ಜನರೂ ಬಂದಿದ್ದರು ಎನ್ನುತ್ತಾರೆ. ಆರೋಪಿತರು ಬಂದಂತಹ ಕಾರು ಯಾವುದೆಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ಕಾರನ್ನು ಪೋಲಿಸರು ಅಮಾನತುಪಡಿಸಿಕೊಂಡಿರುವುದಿಲ್ಲ.

1 ಹಾಗೂ 2 ನೇ ಆರೋಪಿತರು ನನ್ನಮೇಲೆ ಹಲ್ಲೆ ಮಾಡಿದ್ದು ಅವರೊಂದಿಗೆ ಮತ್ತೊಬ್ಬರು ಇದ್ದರು, ಅವರು ಯಾರೆಂದು ನನಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಮತ್ತೊಬ್ಬರು ಇದ್ದರು ಎಂಬ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಅಥವಾ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

ನಿಪಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ.2 ರಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ರ ದಬ್ಬೆಯು ು ಸಾಮಾನ್ಯವಾಗಿ ಎಲ್ಲಾ ಕಡೆ ಇರುತ್ತದೆ ಎಂದರೆ ಸರಿ. ಮುದ್ದೆ ಮಾಲು1 ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಮುದ್ದೆ ಮಾಲಿನಿಂದಲೇ ಹಲ್ಲೆಯಾಗಿದ್ದ ಬಗ್ಗೆ ಯಾವುದೇ ವಿಶೇಷ ಗುರುತಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ, ಆರೋಪಿತರು ಹಲ್ಲೆ ಮಾಡಿ , ಅವಾಚ್ಯವಾಗಿ ಬೈದಿರುವುದಿಲ್ಲ

ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ಮಹಜರನ್ನು ಪೋಲಿಸ್ ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಅನ್ನು ನಾನು ಪೋಲಿಸರ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ಅವಾಚ್ಯವಾಗಿ ಬೈದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪೋಲಿಸರ ಮುಂದೆ ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ಆರೋಪಿಗೂ ಹಾಗೂ ಪ್ರಕರಣಕ್ಕೂ ಯಾವುದೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಃ ಮರು ವಿಚಾರಣೆ ಇಲ್ಲಾಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-

ಸಿವಿಲ್ ನ್ಯಾಯಾಧೀಶರು ಮತ್ತು

ಸಾಕ್ಷಿಯ ಸಹಿಃ ಪ್ರ.ದ.ನ್ಯಾ.ದಂಃ ಕೊಪ್ಪ.